ರೂಪದಲ್ಲಾಗಲಿ ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಮಾಸಿಕ ಮಜೂರಿ ಮಬಲಗಿನ ಮೇಲೆ ಒಬ್ಬ ಗೃಹ ಆಧಾರಿತ ಕೆಲಸಗಾರನಾಗಿ ಯಾಗಲಿ ಅಥವಾ ಒಬ್ಬ ತಾತ್ಕಾಲಿಕ ಅಥವಾ ಸಾಂದರ್ಭಿಕ ಕೆಲಸಗಾರನಾಗಿಯಾಗಲಿ, ಅಥವ ಒಬ್ಬ ವಲಸೆ ಕೆಲಸಗಾರನಾಗಿ ಯಾಗಲಿ, ಅಥವಾ ಮನೆ ಕೆಲಸದವರೂ ಒಳಗೊಂಡಂತೆ ಇದ್ದರೂ, ಅಸಂಘಟಿತ ವಲಯದಲ್ಲಿ ಪರಿಶ್ರಮಧನದ ಸಂದಾಯದ ಮೇಲೆ ಒಬ್ಬ ನಿಯೋಜಕನಿಂದ ನೇರವಾಗಿ ಅಥವಾ ಯಾರೇ ಗುತ್ತಿಗೆದಾರನ ಮೂಲಕ ನಿಯೋಜಿತನಾದವ್ಯಕ್ತಿ.

ಆ) ಅಸಂಘಟಿತ ಕಾರ್ಮಿಕರ ಗಣತಿಯನ್ನು ರಾಜ್ಯದಲ್ಲಿ ಕೈಗೊಂಡಿರುವುದಿಲ್ಲ.

ಇ) ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅಸಂಘಟಿತ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಎನ್‌ಪಿಎಸ್ ಲೈಟ್ ಸ್ವಾವಲಂಭನ್ ಯೋಜನೆ ಎಂಬ ಕಾಂಟ್ರಿಬ್ಯೂಟರಿ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯು ಪ್ರಾರಂಭಿಕವಾಗಿ ದರ್ಜಿಗಳು, ದೋಬಿಗಳು, ಹಮಾಲರು, ಆಟೋ, ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಲಾರಿ ಮತ್ತು ಬಸ್ ಚಾಲಕರು ಹಾಗೂ ನಿರ್ವಾಹಕರು, ಹೋಟೆಲ್ ಕಾರ್ಮಿಕರು, ಆಟೋ ಮೊಬೈಲ್ ವರ್ಕ್‌ಶಾಪ್‌ಗಳ ಕಾರ್ಮಿಕರಿಗೆ ಲಭ್ಯವಾಗಲಿದೆ.

ಈ) ಈ ಯೋಜನೆಯಡಿ ಇಲ್ಲಿಯವರೆಗೆ 3053 ಫಲಾನುಭವಿಗಳನ್ನು ನೊಂದಾಯಿಸಲಾಗಿದೆ.

ಜಲ ಸಂವರ್ಧನಾ ಕಾಮಗಾರಿಗಳು

31 (12) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಲಸಂವರ್ಧನಾ ಇಲಾಖೆಯ ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮುಖಾಂತರ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಕಾಮಗಾರಿಗಳನ್ನು ನಿರ್ವಹಿಸಲು ಸಮುದಾಯವನ್ನು ಸೇರ್ಪಡಿಸಿಕೊಂಡು ಕೆರೆಗಳ ಅಭಿವೃದ್ಧಿ ಮತ್ತು ಕಾಮಗಾರಿಗಳನ್ನು ನಿರ್ವಹಿಸುವ ಉದ್ದೇಶವನ್ನು ಕೈಬಿಡಲು ಕಾರಣಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯ ಮೊದಲ ಹಂತದಲ್ಲಿ ಕಾಮಗಾರಿಗಳನ್ನು ಸಮುದಾಯದ ಮೂಲಕ Empanelled Agency ಯವರಿಂದ ನಿರ್ವಹಿಸಲಾಗುತ್ತಿತ್ತು.

ಎರಡನೇ ಹಂತದಲ್ಲಿ Empanelled Agency ಗೆ ಬದಲಾಗಿ ನೊಂದಣಿಯಾಗಿರುವ ಗುತ್ತಿಗೆದಾರರ ಮೂಲಕ ಸಮುದಾಯವೇ ಕಾಮಗಾರಿಗಳನ್ನು ನಿರ್ವಹಿಸುತ್ತಿವೆ.

ಆ) ಸ್ವಯಂ ಸೇವಾ ಸಂಸ್ಥೆಯ ಅಭಿಯಂತರರು ಕೆರೆ ಬಳಕೆದಾರರ ಸಂಘಕ್ಕೆ ನಿರೀಕ್ಷಿತ ಮಟ್ಟದಲ್ಲಿ ತಾಂತ್ರಿಕ ಸಲಹೆ ನೀಡುವಲ್ಲಿ ವಿಫಲರಾಗಿದ್ದು, ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಕಾರಣ ಎರಡನೇ ಹಂತದಲ್ಲಿ ಜಲ ಸಂವರ್ಧನೆ ಯೋಜನಾ ಸಂಘದ ವತಿಯಿಂದಲೇ ಅಭಿಯಂತರರ ನೇಮಕಾತಿ ಮಾಡಿ ಅವರ ತಾಂತ್ರಿಕ ಮಾರ್ಗದರ್ಶನದಲ್ಲಿ ನೊಂದಾಯಿತ ಗುತ್ತಿಗೆದಾರರ ಮೂಲಕ ಸಮುದಾಯವೇ ಟೆಂಡರ್ ಕರೆದು ಕಾಮಗಾರಿಗಳನ್ನು ನಿರ್ವಹಿಸುತ್ತಿವೆ. ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸುವ ವಿಷಯವನ್ನು ವಿಶ್ವ ಬ್ಯಾಂಕ್ ಅನುಮೋದನೆಯೊಂದಿಗೆ ಕೈಗೊಳ್ಳಲಾಗಿದೆ.

ಬಣಜಾರ ತಾಂಡ್ಯಗಳನ್ನು ರೆವಿನ್ಯೂ ಗ್ರಾಮಗಳಾಗಿ ಪರಿವರ್ತಿಸುವುದು

32 (13) ಶ್ರೀ ಶಿವಲಿಂಗೇಗೌಡ. ಕೆ.ಎಂ. (ಅರಸೀಕೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಎ ದಯವಿಟ್ಟು ಉತ್ತರಿಸುವರೆ?

ಅ) ಬಣಜಾರ ತಾಂಡ್ಯಗಳನ್ನು ಇದುವರೆವಿಗೂ ಕಂದಾಯ ಗ್ರಾಮಗಳಾಗಿ ಪರಿವರ್ತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು;

ಇ) ಎಷ್ಟು ಕಾಲಾವಕಾಶದ ಸಮಯದಲ್ಲಿ ಕಂದಾಯ ಗ್ರಾಮಗಳಾಗಿ ಪರಿವರ್ತನೆ ಮಾಡುವ ಆಲೋಚನೆ ಸರ್ಕಾರದ ಮುಂದಿದೆಯೇ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ರಾಜ್ಯದಲ್ಲಿನ ಲಂಬಾಣಿ ತಾಂಡಾ: ಗೊಲ್ಲರಹಟ್ಟಿ: ಹ್ಯಾಮ್ಲೆಟ್ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಸಚಿವ ಸಂಪುಟದ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಅದರನ್ವಯ 500